**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ,</u>**

**<u>ಸೊರಬ</u>**

**ಸಿ.ಸಿ.ನಂ: 3064/2025**

**ಫಿರ್ಯಾದಿದಾರ:** ಕರ್ನಾಟಕ ಸರ್ಕಾರ
(ಆನವಟ್ಟಿ ಪೋಲಿಸರ ವತಿಯಿಂದಾ)

ವಿರುದ್ಧ

**ಆರೋಪಿತರುಃ**

1. ಮೃತ್ಯುಂಜಯಗೌಡ ಬಿನ್ ಸದಾಶಿವಗೌಡ
ವಯಸ್ಸುಃ 53 ವರ್ಷ,
ವಾಸಃ ಸಂತೊಳ್ಳಿ ಗ್ರಾಮ, ಶಿರಸಿ ತಾಲ್ಲೂಕು,
ಉತ್ತರಕನ್ನಡ ಜಿಲ್ಲೆ.

2. ಜೇಷ್ಠ ಬಿನ್ ಮೃತ್ಯುಂಜಯಗೌಡ
ವಯಸ್ಸುಃ21 ವರ್ಷ,
ವಾಸಃ ಸಂತೊಳ್ಳಿ ಗ್ರಾಮ, ಶಿರಸಿ ತಾಲ್ಲೂಕು,
ಉತ್ತರಕನ್ನಡ ಜಿಲ್ಲೆ.

3. ಈರಯ್ಯ ಬಿನ್ ದುಂಡಯ್ಯ
ವಯಸ್ಸುಃ50 ವರ್ಷ,
ವಾಸಃ ಸೂರಣಗಿ ಗ್ರಾಮ, ಸೊರಬ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

4. ಕಾವ್ಯ ಕೋಂ ಮೃತ್ಯುಂಜಯಗೌಡ
ವಯಸ್ಸುಃ47 ವರ್ಷ,
ವಾಸಃ ಸಂತೊಳ್ಳಿ ಗ್ರಾಮ, ಶಿರಸಿ ತಾಲ್ಲೂಕು,
ಉತ್ತರಕನ್ನಡ ಜಿಲ್ಲೆ.

********

ನಾನು ಶ್ರೀ ರಾಜು.ಕೃ.ಶೇಡಬಾಳಕರ., ಬಿ.ಕಾಂ. ಎಲ್.ಎಲ್.ಬಿ.,ಸಿ/ಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಸೊರಬ ನಿಮ್ಮ ಮೇಲೆ ಈ ಕೆಳಗಿನಂತೆ ಆಪಾದಿಸುತ್ತೇನೆಃ-

**<u>ದೋಷಾರೋಪಣೆ</u>**

ಮೊದಲನೇಯದಾಗಿ, ದಿನಾಂಕ 18.06.2025 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಸೊರಬ ತಾಲ್ಲೂಕು , ಆನವಟ್ಟಿ ಪೊಲೀಸ್ ಠಾಣಾ ವ್ಯಾಪ್ತಿಯ ಸೂರಣಗಿ ಗ್ರಾಮದ ಸ.ನಂ.93/1 ರ ಅಡಿಕೆ ತೋಟದ ಶೀಲಮ್ಮ, ಲಿಂಗರಾಜಗೌಡ, ಜಗದೀಶಗೌಡ ಮತ್ತು ಸುಜಾತಾರವರ ಜಂಟಿ ಖಾತೆಯಲ್ಲಿರುವ ಜಮೀನಿಗೆ

ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಭಾ. ನ್ಯಾ. ಸಂ. ಕಲಂ. 329(3) ಸಹಕಲಂ.3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸುತ್ತೇನೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, 2 ನೇ ಆರೋಪಿಯಾದ ನೀವು ಚಾಸಾ.1 ರವರಿಗೆ ದೊಣ್ಣೆಯಿಂದ ಹೊಡೆಯಲು ಬಂದಾಗ ಚಾಸಾ.1 ರವರು ತಪ್ಪಿಸಿಕೊಳ್ಳಲು ಹೋಗಿ ಕೈ ಮುಂದೆ ಚಾಚಿದಾಗ ದೊಣ್ಣೆಯು ಬಲಮುಗೈಗೆ ಬಿದ್ದು ಸಾಮಾನ್ಯ ಸ್ವರೂಪದ ಒಳನೋವುಂಟು ಮಾಡಿದ್ದು, ಆ ಮೂಲಕ ಭಾ. ನ್ಯಾ. ಸಂ. ಕಲಂ. 118(1) ಸಹಕಲಂ. 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆಪಾಧಿಸುತ್ತೇನೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, 4 ನೇ ಆರೋಪಿಯಾದ ನೀವು ಚಾಸಾ.2 ರವರನ್ನು ಹಿಡಿದು ಎಳೆದಾಡಿ ಭುಜಗಳಿಗೆ ಸಾಮಾನ್ಯ ಸ್ವರೂಪದ ಒಳನೋವುಂಟು ಮಾಡಿದ್ದು, ಆ ಮೂಲಕ ಭಾ. ನ್ಯಾ. ಸಂ. ಕಲಂ. 115(2) ಸಹಕಲಂ. 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆಪಾಧಿಸುತ್ತೇನೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನೀವು ವಾಪಸ್ಸು ಹೋಗುವಾಗ ನಿಮ್ಮ ಇಂಜಕ್ಷನ್ ಆರ್ಡರ್ ನನಗೇನು ಮಾಡುವುದಿಲ್ಲ, ನಾನು ಯಾವ ಕೋರ್ಟ್ ಕಚೇರಿಗೂ ಹೆದುರುವುದಿಲ್ಲ ಅಂತಾ ಹೇಳಿ ಇನ್ನೊಂದು ಸಾರಿ ಈ ಜಮೀನಿಗೆ ಕಾಲಿಟ್ಟರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾ. ನ್ಯಾ. ಸಂ. ಕಲಂ. 351(2) ಸಹಕಲಂ. 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆಪಾಧಿಸುತ್ತೇನೆ.

**ಪ್ರಶ್ನೆ: 1** ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಆಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?

**1 ನೇ ಆರೋಪಿ ಉತ್ತರಃ**

**2 ನೇ ಆರೋಪಿ ಉತ್ತರಃ**

**3 ನೇ ಆರೋಪಿ ಉತ್ತರಃ**

**4 ನೇ ಆರೋಪಿ ಉತ್ತರಃ**

**ಪ್ರಶ್ನೆ: 2** ನೀವು ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ಪ್ರತಿರಕ್ಷೆ ಸಾಧಿಸುವೆಯಾ?

**1 ನೇ ಆರೋಪಿ ಉತ್ತರಃ**

**2 ನೇ ಆರೋಪಿ ಉತ್ತರಃ**

**3 ನೇ ಆರೋಪಿ ಉತ್ತರಃ**

**4 ನೇ ಆರೋಪಿ ಉತ್ತರಃ**

(ದಿನಾಂಕ 13.07.2026 ರಂದು ಆರೋಪಿತರಿಂದ ಮೇಲ್ಕಂಡ ಆಪಾದನೆ ನೀಡಲ್ಪಟ್ಟಿರುತ್ತದೆ ಎಂದು ದೃಢೀಕರಿಸಿದೆ).

**ಸಿ/ಸಿ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಮ್.ಎಫ್.ಸಿ. ಸೊರಬ.**